# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s Ecoren Energy India Private Limited ರವರಿಗೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರದ ದಿನಾಂಕ:13.11.2018 ರ ಹಂಚಿಕೆ ಸಮಿತಿ ಸಭೆ.
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:KREDL/08/EEIPL- 5MW/Bisnahalli/Ballari/F-1760/2021/2390, ದಿನಾಂಕ:13.08.2021

ಸಂ.1580 ದಿನಾಂಕ 30/9/21

MD KREDL

AGM (H)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ (1)ರ ಹಂಚಿಕೆ ಸಮಿತಿ ಸಭೆಯಲ್ಲಿ M/s Ecoren Energy India Private Limited ರವರಿಗೆ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಅಗ್ರಹಾರ, ಸೂಲ್ದಹಳ್ಳಿ, ಬನಿವಿಕಲ್ಲು, ಹೂಲಯ್ಯನಹಳ್ಳಿ, ಚಿಕ್ಕೋಬನಹಳ್ಳಿ, ಕಂಚೋಬನಹಳ್ಳಿ, ಗೊಲ್ಲರಹಟ್ಟಿ, ಮಾದಲಕ್ಕನಹಳ್ಳಿ ಮತ್ತು ಕಡೇಕೊಳ್ಳ ಗ್ರಾಮಗಳಲ್ಲಿ ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ವರ್ಗದಡಿಯಲ್ಲಿ ಹಂಚಿಕೆ ನೀಡುವಂತೆ ಕೋರಿರುವ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನು ಆಗಿದ್ದು, ಸದರಿ ಸ್ಥಳದಲ್ಲಿ ಪವನ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ 5 ಮೆ.ವ್ಯಾ ಸಾಮರ್ಥ್ಯಕ್ಕೆ ಹಂಚಿಕೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಲಾಗಿತ್ತು.

GM (Tech) KREDL

ATO-W

ಮೇಲೆ ಓದಲಾದ ಕ್ರ.ಸಂ.(2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s Ecoren Energy India Private Limited ರವರು ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಅಗ್ರಹಾರ, ಸೂಲ್ದಹಳ್ಳಿ, ಬನಿವಿಕಲ್ಲು, ಹೂಲಯ್ಯನಹಳ್ಳಿ, ಚಿಕ್ಕೋಬನಹಳ್ಳಿ, ಕಂಚೋಬನಹಳ್ಳಿ, ಗೊಲ್ಲರಹಟ್ಟಿ, ಮಾದಲಕ್ಕನಹಳ್ಳಿ ಮತ್ತು ಕಡೇಕೊಳ್ಳ ಗ್ರಾಮಗಳಲ್ಲಿ 5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಸ್ವಂತ ಬಳಕೆ/ಮೂರನೇ ವ್ಯಕ್ತಿಗೆ ಮೂರನೇ ವ್ಯಕ್ತಿಗೆ ವೀಲಿಂಗ್ ಮುಖಾಂತರ ಮಾರಾಟ ಮಾಡುವ ಪ್ರಸ್ತಾವನೆಯನ್ನು ಪರಿಶೀಲಿಸಿ, ದಿನಾಂಕ:13.11.2018 ರ ಹಂಚಿಕೆ ಸಮಿತಿಯು ಅನುಮೋದಿಸಿರುವಂತೆ ಹಂಚಿಕೆ ಆದೇಶ ಹೊರಡಿಸುವ ಕುರಿತು ತಾಂತ್ರಿಕ ಮಾಹಿತಿಯನ್ನು ಒಳಗೊಂಡ ಪ್ರಸ್ತಾವನೆಯನ್ನು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

**Geographical area description for 5 MW capacity Wind Power Project of M/s Ecoren Energy India Private Limited**

| Sl. No | Topo sheet No. | Proposed capacity in MW | Near by villages of the proposed area and district. | Geographical area description of the project |
|---|---|---|---|---|
| 1 | 2 | 3 | 4 | 5 |
| 1 | 57 B/5 | 5 MW (10 Nos x 500 kW) | Agrahara, Suldahalli, Banivikallu, Hulayyanahalli, Chikkobanahalli, Kanchobanahalli, Gollarahatti, Madalakkanahalli and Kodekolla villages of Kudligi taluk, Bellary district | In the villages of Column No.(4), it is proposed to implement the wind power project by the developer. **Peaks:** 654, 675, 685, 670, 713, 653, 739, 677 and 755 m AMSL<br>Wind Section No. 1443 Date 1/10/21 |
| | **Total** | **5 MW** | | |

Sig

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ದಿನಾಂಕ: 07.09.2021 ರ ಆದೇಶದಲ್ಲಿ ನವೀಕರಿಸಬಹುದಾದ ಇಂಧನ ಯೋಜನೆಗಳಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒಂದು ವರ್ಷದ ಅವಧಿಗೆ ನೀಡುವ ವಿಷಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 1061/2019 ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪಿಲ್ ಸಂಖ್ಯೆ: 9619-9637/2019 ರಲ್ಲಿ ಮಾನ್ಯ ನ್ಯಾಯಾಲಯಗಳು ನೀಡುವ ಅಂತಿಮ ಆದೇಶಗಳಗೊಳಪಟ್ಟು ಬ್ಯಾಂಕಿಂಗ್ ಸೌಲಭ್ಯವನ್ನು ದಿನಾಂಕ: 31.03.2022 ರವರೆಗೆ ವಿಸ್ತರಿಸಿ ಆದೇಶಿಸಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 187 ಎನ್‌ಸಿಇ 2021</u>**
**<u>ಬೆಂಗಳೂರು, ದಿನಾಂಕ:27/09/2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Ecoren Energy India Private Limited ರವರಿಗೆ ಬಳ್ಳಾರಿ ಜಿಲ್ಲೆಯ, ಕೂಡ್ಲಿಗಿ ತಾಲ್ಲೂಕಿನ ಅಗ್ರಹಾರ, ಸೂಲ್ದಹಳ್ಳಿ, ಬನಿವಿಕಲ್ಲು, ಹೂಲಯ್ಯನಹಳ್ಳಿ, ಚಿಕ್ಕೋಬನಹಳ್ಳಿ, ಕಂಚೋಬನಹಳ್ಳಿ, ಗೊಲ್ಲರಹಟ್ಟಿ, ಮಾದಲಕ್ಕನಹಳ್ಳಿ ಮತ್ತು ಕಡೇಕೊಳ್ಳ ಗ್ರಾಮಗಳಲ್ಲಿ 5 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

**Geographical area description for 5 MW capacity Wind Power Project of M/s Ecoren Energy India Private Limited**

| Sl. No | Topo sheet No. | Proposed capacity in MW | Near by villages of the proposed area and district. | Geographical area description of the project |
|---|---|---|---|---|
| 1 | 2 | 3 | 4 | 5 |
| 1 | 57 B/5 | 5 MW (10 Nos x 500 kW) | Agrahara, Suldahalli, Banivikallu, Hulayyanahalli, Chikkobanahalli, Kanchobanahalli, Gollarahatti, Madalakkanahalli and Kodekolla villages of Kudligi taluk, Bellary district | In the villages of Column No.(4), it is proposed to implement the wind power project by the developer. **Peaks:** 654, 675, 685, 670, 713, 653, 739, 677 and 755 m AMSL |
| | **Total** | **5 MW** | | |

**<u>ಷರತ್ತುಗಳು:</u>**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರದ ಆದೇಶ ಸಂಖ್ಯೆ:ಇಎನ್ 435 ಎನ್‌ಸಿಇ 2011, ದಿನಾಂಕ :06.01.2012ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಈ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ:ಇಎನ್ 354 ಎನ್‌ಸಿಇ 2008, ದಿನಾಂಕ:19.01.2010 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ಇಎನ್ 07 ಎನ್‌ಸಿಇ 2011, ದಿನಾಂಕ:18.07.2011ರಲ್ಲಿ ನಿಗದಿಪಡಿಸಿರುವ ಅವಧಿಯೊಳಗಾಗಿ ಅನುಷ್ಠಾನ ಗೊಳಿಸತಕ್ಕದ್ದು.
3. ಅಭಿವೃದ್ಧಿದಾರರು ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿಪಡಿಸಬೇಕು.

...3